ಮೂಗನಂತೆ ಕುಳಿತಿರುತ್ತಿದ್ದ. ಅಮ್ಮನಿಗೂ ಯಾವುದೋ ದೂರದ ಆಸೆಯಿತ್ತು ಎಂದು ಕಾಣಿಸುತ್ತದೆ. ಅವಳು ಅವನು ಮನೆಗೆ ಬಂದರೆ ಕೆದಕಿ ಕೆದಕಿ ಮಾತನಾಡಿಸುತ್ತಿದ್ದಳು. ಅವನು ಎಲ್ಲದಕ್ಕೂ ಆಂ.. ಹೂಂ.. ಎಂದು ಮಾತ್ರ ಉತ್ತರಿಸುತ್ತಿದ್ದ. ಅವರಿಬ್ಬರ ಮಾತುಕತೆಯನ್ನು ನೆನೆದು ನನಗೆ ನಗು ಬರುತಿತ್ತು.

ಮನೆಯಲ್ಲಿ ಅಮ್ಮ ಚೆನ್ನಾಗಿದ್ದಾರಾ..?

ಹೂಂ..

ಮೈಸೂರಿನಿಂದ ಯಾವಾಗ ಬಂದೆ..?

ನೆನ್ನೆ..

ಎಂ.ಕಾಮಿಗೆ ಸೇರಿಕೊಂಡಂತೆ..

ಹೂಂ..

ಅದು ಈಗ ಒಂದು ವರ್ಷ ಮುಗಿಯಿತಾ..?

ಹೂಂ..

ಇನ್ನೂ ಒಂದು ವರ್ಷ ಓದೋದಿದೆ ಅಲ್ವಾ..?

ಹೂಂ..

ಸ್ವಲ್ಪ ಕಾಪಿ ಕುಡೀತೀಯಾ..?

ಹೂಂ..

ಹೇಮಾ.. ಒಂದು ಲೋಟ ಕಾಫಿ ಮಾಡಿಕೊಂಡು ಬಾರೇ.. ಅಡುಗೆ ಮನೆಯ ಬಾಗಿಲಿಗೆ ಒರಗಿ ನಿಂತಿರುತ್ತಿದ್ದ ನನ್ನತ್ತ ತಿರುಗಿ ಅಮ್ಮ ಆಜ್ಞೆ ಮಾಡುತಿದ್ದಳು. ನಾನು ಕಾಫಿ ಮಾಡಿಕೊಂಡು ತಂದುಕೊಟ್ಟ ಮೇಲೆ ಕಾಫಿ ಕುಡಿದು ಬರ್ತೀನಿ.. ಎಂದವನು ಹೊರಡುತ್ತಿದ್ದ. ಅಮ್ಮ ಅವನು ಹೋದ ಮೇಲೆ ಎಷ್ಟೊಂದು ಒಳ್ಳೆಯ ಹುಡುಗ ನೋಡು.. ಅಷ್ಟು ದೊಡ್ಡ ಸಾಹುಕಾರರ ಮನೆಯವನಾದರೂ ಒಂದು ಚೂರೂ ಗತ್ತಿಲ್ಲ.. ಅಹಂಕಾರವಿಲ್ಲ.. ಚಿನ್ನದಂತಹ ಹುಡುಗ.. ಎಂದು ತಾರೀಪು ಮಾಡುತಿದ್ದಳು. ಅವಳು ಹೇಳಿದ್ದೇನೋ ನಿಜವಾಗಿತ್ತು. ಆದರೆ ನನ್ನ ಮನಸ್ಸಿಗೆ ಅದು ತಾಕುತ್ತಿರಲಿಲ್ಲ. ನನ್ನಲ್ಲಿ ಭಾವನೆಗಳೇ ಬತ್ತಿಹೋಗಿದ್ದವು.

ನನ್ನ ಮದುವೆಯ ಕಾರ್ಡನ್ನು ಅಮ್ಮನೇ ಹೋಗಿ ಗಿರಿಧರನ ತಾಯಿಗೆ ಕೊಟ್ಟುಬಂದಿದ್ದರಂತೆ. ಆದರೆ ಅವರಾಗಲೀ, ಗಿರಿಧರನಾಗಲೀ ಮದುವೆಗೆ ಬಂದಿರಲಿಲ್ಲ. ಆಮೇಲೆ ನಾನು ಮದುವೆಯಾದ ಹೊಸತರಲ್ಲಿ ಒಂದು ದಿನ ಊರಿಗೆ ಬಂದಾಗ ಅಮ್ಮ ನನ್ನ ಕಿವಿಯಲ್ಲಿ ಆ ಗಿರಿಧರ ನಿನ್ನನ್ನು ಇಷ್ಟಪಟ್ಟಿದ್ದನಂತೆ ಕಣೇ.. ಪಾಪ! ಅವನೂ ಬಾಯಿಬಿಟ್ಟು ಹೇಳಲಿಲ್ಲ.. ನಾವೂ ಅವರು ಸಾಹುಕಾರರು ಎಂದು ಒಂದು ಮಾತು ಕೇಳಲಿಲ್ಲ.. ಹೋಗಲಿ ಬಿಡು.. ಎಲ್ಲಾ ಹಣೆಯಬರಹ.. ಈಗ ಊರ ತುಂಬಾ ಅದೇ ಸುದ್ದಿ.. ಎಂದು ಪಿಸುಗುಟ್ಟಿದ್ದನ್ನು ಕೇಳಿ ನನಗೆ ಅತೀವ ವೇದನೆಯಾಗಿತ್ತು. ನಮ್ಮ ಅಪ್ಪ ಅಮ್ಮನಿಗಾಗಿ ನಾನು ಯಾರನ್ನೋ ಮದುವೆಯಾಗಬೇಕಿತ್ತು. ಆಗಿಬಿಟ್ಟೆ. ಗಿರಿಧರನ ಬಗ್ಗೆ ನನಗೆ ಯಾವುದೇ ಭಾವನೆಗಳಿಲ್ಲವಾಗಿದ್ದರೂ ಅವನನ್ನೇ ಮದುವೆಯಾಗಿದ್ದರೆ ಅಪ್ಪಅಮ್ಮನ ಎದುರಿಗಾದರೂ ಜೀವನಪೂರ್ತಿ ಇರಬಹುದಿತ್ತು ಎಂದು ನನ್ನ ಮನಸ್ಸು ಒಂದು ಕ್ಷಣ ತಳಮಳಿಸಿತ್ತು. ಮತ್ತೊಮ್ಮೆ ನಾನು ದುರದೃಷ್ಟದ ಹೆಣ್ಣು ಎಂಬುದು ಸಾಬೀತಾಗಿತ್ತು.

ನನ್ನ ಗಂಡನ ಮನೆಯಲ್ಲಿಯೂ ನನಗೆ ಕೊರತೆಗಳೇನೂ ಇಲ್ಲ. ನನ್ನ ಗಂಡ ನನಗಾಗಿ ಆಗಾಗ ಕಣ್ಣುಕೋರೈಸುವ ಒಡವೆಗಳನ್ನೂ, ಬೆಲೆ ಬಾಳುವ ಸೀರೆ, ಉಡುಪುಗಳನ್ನು ತಂದುಕೊಡುತ್ತಾರೆ. ನಾನು ಯಾವಾಗಲೂ ತರೇಹವಾರಿ ಬಟ್ಟೆ ತೊಟ್ಟಿರಬೇಕು, ನಾನು ತೊಡುವ ಬಟ್ಟೆ ತುಸುವೂ ಸುಕ್ಕಾಗಿರಬಾರದು ಎಂದು ಆಶಿಸುತ್ತಾರೆ. ಬಟ್ಟೆಗಳನ್ನು ತೆಗೆದುಕೊಂಡು ಹೋಗಿ ಇಸ್ತ್ರಿ ಮಾಡಿಕೊಡಲೆಂದೇ ಒಬ್ಬರನ್ನು ನೇಮಿಸಿದ್ದಾರೆ. ನಾನು ಸುಖವಾಗಿದ್ದೇನೆ ಎಂದುಕೊಂಡಿದ್ದೇನೆ. ಕೆಲವೊಂದು ನಡುವಳಿಕೆಗಳನ್ನು ಬಿಟ್ಟರೆ ನನ್ನ ಗಂಡನೂ ಒಳ್ಳೆಯವರೇ.. ಅವರಿಗೆ ಯಾವುದೇ ದುಶ್ಚಟಗಳಿಲ್ಲ. ಆದರೆ ಅವರ ಒಂದೇ ಒಂದು ದೌರ್ಬಲ್ಯವೆಂದರೆ ದುಡ್ಡಿನದು. ದುಡ್ಡಿನ ಮುಂದೆ ಯಾವುದೇ ದೇವರಿಲ್ಲ ಎಂದೇ ಅವರು ತಿಳಿದಿದ್ದಾರೆ. ಹಗಲು ರಾತ್ರಿ ಅದಕ್ಕಾಗಿ ದುಡಿಯುವುದನ್ನು ಬಿಟ್ಟರೆ ಅವರಿಗೆ ಬದುಕಿನ ಸಂತೋಷಗಳೇ ಗೊತ್ತಿಲ್ಲವೇನೋ ಎಂದು ನನಗೆ ಒಮ್ಮೊಮ್ಮೆ ಆಶ್ಚರ್ಯವಾಗುತ್ತದೆ. ನನ್ನ ಗಂಡನಿಗೆ ಜಯನಗರದಲ್ಲಿ ಪಿತ್ರಾರ್ಜಿತವಾಗಿ ಬಂದ ಗೃಹೋಪಯೋಗಿ ವಸ್ತುಗಳ ಮಾರಾಟ ಮಳಿಗೆಯೊಂದಿದೆ. ಅದರ ಜೊತೆಗೆ ಒಂದು ಫೈನಾನ್ಸ್ ಕಂಪೆನಿಯನ್ನೂ ನಡೆಸುತಿದ್ದಾರೆ, ನನ್ನ ಭಾವನಿಗೆ ಬಾತ್ರೂಮು ಫಿಟ್ಟಿಂಗುಗಳ ವಾಪಾರದ ಮಳಿಗೆ, ಮೈದುನನಿಗೆ ಪ್ಲೈವುಡ್ ಮಾರಾಟದ ಅಂಗಡಿ ಪಿತ್ರಾರ್ಜಿತವಾಗಿ ಬಂದಿವೆ, ಅವೆರಡೂ ಜಯನಗರದಲ್ಲಿ ನನ್ನ ಗಂಡನ ಮಳಿಗೆಯ ಪಕ್ಕದಲ್ಲಿಯೇ ಇವೆ. ನನ್ನ ವಾರಗಿತ್ತಿ ದೊಡ್ಡ ಕುಟುಂಬದ ಶ್ರೀಮಂತರ ಮಗಳು. ಹಾಗಾಗಿ ನನ್ನ ಅತ್ತೆಗೆ ನಾನು ಬಡ ಕುಟುಂಬದವಳೆಂದು ತುಸು ತಾತ್ಸಾರ. ನನ್ನ ವಾರಗಿತ್ತಿಗೆ ಇಬ್ಬರು ಹೆಣ್ಣುಮಕ್ಕಳು. ಪಾಪೂ ಹುಟ್ಟಿದ ಮೇಲೆ ಗಂಡು ಮಗುವನ್ನು ಹಡೆದನೆಂದು ನನ್ನ ಅತ್ತೆಗೆ ನನ್ನ ಮೇಲೆ ಸ್ವಲ್ಪ ಅಭಿಮಾನ ಮೂಡಿದೆ. ಮೊದಲು ಸಮಯ ಸಿಕ್ಕಾಗಲೆಲ್ಲಾ ನನ್ನ ಮಗ ನಿನ್ನ ರೂಪಕ್ಕೆ ಮರುಳಾಗಿ ನಿನ್ನನ್ನು ಹಟ ಹಿಡಿದು ಮದುವೆಯಾದ ಎಂದು ಹಂಗಿಸುತ್ತಿದ್ದರು. ಅದು ಆದದ್ದೂ ಹಾಗೆಯೇ ಇರಬಹುದು.

ನಾನು ಕೆಲಸ ಬಿಟ್ಟು ಊರಿಗೆ ಬಂದು ಒಂದು ವರ್ಷದ ಮೇಲಾಗಿತ್ತು. ಮೈಸೂರಿನ ನಮ್ಮ ದೊಡ್ಡಮನ ಮಗ, ನನ್ನ ಅಣ್ಣನ ಮದುವೆ ಸೆಟ್ಟಾಯಿತು. ಹುಡುಗಿ ಬೆಂಗಳೂರಿನವಳು. ದೊಡ್ಡಮ್ಮದೊಡ್ಡಪ್ಪ ಜೊತೆಯಲ್ಲಿ ನಮ್ಮ ಮನೆಗೆ ಬಂದರು. ಅಮ್ಮನಿಗೆ ಮತ್ತು ನನಗೆ ಸೀರೆ ರವಿಕೆ, ಅಪ್ಪನಿಗೆ ಬಿಳಿಯ ಶರಟಿನ ಬಟ್ಟೆ, ಬಿಳಿಯ ಪಂಚೆ ತಂದಿದ್ದರು. ಅಪ್ಪನಿಗೆ ಮದುವೆಯ ಕಾರ್ಡ್ ಕೊಟ್ಟು, ಎಲ್ಲರೂ ಎರಡು ದಿನ ಮುಂಚಿತವಾಗಿಯೇ ಮೈಸೂರಿಗೆ ಬರಬೇಕೆಂದು ಆಹ್ವಾನಿಸಿದರು. ಮಂಚದ ಮೇಲೆ ಕುಳಿತಿದ್ದ ಅಪ್ಪ ಎಡಗೈನಲ್ಲಿಯೇ ಕಾರ್ಡನ್ನು ಸ್ವೀಕರಿಸಿ ಆಯ್ತು ಎನ್ನುವಂತೆ ತಲೆ ಆಡಿಸಿದರು.

ಅಮ್ಮನಿಗೆ ಎರಡು ದಿನ ಮುಂಚಿತವಾಗಿಯೇ ಅಕ್ಕನ ಮಗನ ಮದುವೆಗೆ ಹೋಗಬೇಕೆನ್ನುವ ಸಡಗರ, ಸಂಭ್ರಮ. ಇನ್ನೊಂದು ಕಡೆ ಅಪ್ಪನನ್ನು ಬಿಟ್ಟು ಹೋಗುವುದಾದರೂ ಹೇಗೆ ಎಂಬ ಚಿಂತೆ. ಅವಳು ದ್ವಂದ್ವದಲ್ಲಿ ಸಿಲುಕಿದ್ದುದು ಅವಳ ಮುಖದ ಚಹರೆಯಿಂದಲೇ ನನಗೆ ತಿಳಿಯಿತು. ನಾನೂ ಮದುವೆಗೆ ಹೋಗಲೇಬೇಕಾಗಿತ್ತು. ಅವನು ನನ್ನ ಬಗ್ಗೆ ಚಿಕ್ಕ ಹುಡುಗಿಯಿಂದಲೂ ತುಂಬಾ ಪ್ರೀತಿ ಇಟ್ಟುಕೊಂಡಿದ್ದ ನನ್ನ ಅಣ್ಣ. ಅಮ್ಮಾ.. ನೀನು ಎರಡು ದಿನ ಮುಂಚಿತವಾಗಿಯೇ ಮೈಸೂರಿಗೆ ಹೋಗು,, ಅಪ್ಪನನ್ನು ನಾನು ನೋಡಿಕೊಳ್ಳುತ್ತೇನೆ.. ಮದುವೆಯ ದಿನ ನಾನೂ ಬೆಳಿಗ್ಗೆ ಬೆಂಗಳೂರಿಗೆ ಬರುತ್ತೇನೆ.. ಎಂದು ಅಮ್ಮನಿಗೆ ಸಮಾಧಾನ ಹೇಳಿದೆ. ಆದರೂ ಅಮ್ಮ ತುಸು ಬೇಸರದಿಂದಲೇ ಮದುವೆಗಿಂತ ಎರಡು ದಿನ ಮುಂಚಿತವಾಗಿಯೇ ಮೈಸೂರಿಗೆ ಹೊರಟಳು. ಹೋಗುವಾಗ ಅವರನ್ನು ಒಬ್ಬರನ್ನೇ ಬಿಟ್ಟು ಎಲ್ಲೂ ಹೋಗಬೇಡ.. ಎಂದು ಕಣ್ಣು ತುಂಬಿಕೊಂಡು ಹೇಳಿ ಹೋದಳು.

ಮದುವೆಯ ದಿನ ಬೆಳಿಗ್ಗೆ ಬೇಗ ಎದ್ದು ತಿಂಡಿ ಮಾಡಿ ಅಪ್ಪನಿಗೆ ತಿನ್ನಿಸಿದೆ. ಅಪ್ಪ ಎಷ್ಟೋ ಬಾರಿ ನಾನೇ ತಿನ್ನುತ್ತೇನೆಂದು ಹಟ ಮಾಡಿ ಎಡಗೈನಲ್ಲಿಯೇ ತಿಂಡಿಯನ್ನು ಸುತ್ತಲೂ ಮಕ್ಕಳಂತೆ ಚೆಲ್ಲಾಡಿಕೊಂಡು ತಿಂದಿದ್ದಾರೆ. ಅದನ್ನು ನೋಡಲಾಗದೆ ಈಗಲೂ ನಾನೋ ಅಥವಾ ಅಮ್ಮನೋ ತಿಂಡಿಯನ್ನೂ, ಊಟವನ್ನೂ ತಿನ್ನಿಸುತ್ತೇವೆ. ನಾನು ದೊಡ್ಡಮ್ಮ ದೊಡ್ಡಪ್ಪ ಬೇಸರ ಮಾಡಿಕೊಂಡಾರೆಂದು ಅವರು ತಂದಿದ್ದ ಸೀರೆರವಿಕೆಗಳನ್ನು ಧರಿಸಿ ಮುಖಕ್ಕೆ ಏನೂ ಮೇಕಪ್ ಮಾಡಿಕೊಳ್ಳದೆ, ಕೊನೆಗೆ ಪೌಡರನ್ನೂ ಲೇಪಿಸಿಕೊಳ್ಳದೆ, ತಲೆಬಾಚಿ ಜಡೆ ಹೆಣೆದುಕೊಂಡು ಸಿದ್ಧಳಾಗಿ, ಮಧ್ಯಾಹ್ನ ಬೇಗ ಬರುತ್ತೇನೆಂದು ಅಪ್ಪನಿಗೆ ತಿಳಿಸಿ ಬಸ್ಸು ಹತ್ತಿದೆ. ಧಾರಾಮಹೂರ್ತದ ಸಮಯಕ್ಕೆ ಸರಿಯಾಗಿ ಛತ್ರದಲ್ಲಿದ್ದೆ.

ಗೊರಗುಂಟೆ ಪಾಳ್ಯದ ಬಳಿ ಇದ್ದ ಸಣ್ಣ ಛತ್ರವೊಂದರಲ್ಲಿ ಜರುಗಿದ ಅದೊಂದು ಆಡಂಬರಗಳಿಲ್ಲದ ಸರಳ ಮದುವೆ. ಹೆಣ್ಣಿನ ಕಡೆಯವರೂ ನಮ್ಮಂತೆಯೇ ಬಡವರೆಂದು ಅವರ ವೇಷಭೂಷಣಗಳನ್ನು ನೋಡಿದಾಗ ತಿಳಿಯುತಿತ್ತು. ನಾನು ಅಲ್ಲಿ ಜಾಸ್ತಿ ಹೊತ್ತು ನಿಲ್ಲಲಿಲ್ಲ. ಮನೆಯಲ್ಲಿ ಅಪ್ಪ ಒಬ್ಬರೇ ಇದ್ದಾರೆಂಬುದು ಮನಸ್ಸಿನಲ್ಲಿ ಕೊರೆಯುತಿತ್ತು. ದೊಡ್ಡಮ್ಮ ದೊಡ್ಡಪ್ಪ, ಅವರ ಮಗಳು ನನ್ನ ಅಕ್ಕ, ಎಲ್ಲರನ್ನೂ ಮಾತನಾಡಿಸಿಕೊಂಡು, ಧಾರೆ ಮುಗಿದೊಡನೆಯೇ ಅಣ್ಣ ಮತ್ತು ಅವನ ಹೆಂಡತಿಯೊಂದಿಗೆ ನಿಂತು ಫೋಟೋ ತೆಗೆಸಿಕೊಂಡು, ಅಮ್ಮನಿಗೆ ನೀನೇನೂ ಆತಂಕಪಡಬೇಡ.. ನಿಧಾನವಾಗಿ ಬಾ.. ಎಂದು ತಿಳಿಸಿ ಊರಿಗೆ ಬಸ್ಸು ಹತ್ತಿದೆ.

(ಸಶೇಷ)